

# ರೈತ ಮತ್ತು ದೇವರು

ಒಬ್ಬ ರೈತನಿಗೆ ಒಮ್ಮೆ ದೇವರ ಮೇಲೆ ತುಂಬ ಕೋಪ ಬಂತು. ಒಮ್ಮೆ ಅತಿವೃಷ್ಟಿ, ಒಮ್ಮೆ ಅನಾವೃಷ್ಟಿ, ಒಮ್ಮೆ ಕಡುಬಿಸಿಲು, ಇನ್ನೊಮ್ಮೆ ಆಲಿಕಲ್ಲು ಮಳೆ.. ಹೀಗೆ ಒಂದಿಲ್ಲೊಂದು ಕಾರಣದಿಂದ ದೇವರು ನಮ್ಮ ಬೆಳೆಯನ್ನು ಹಾಳುಮಾಡುತ್ತಾನೆಂಬುದೇ ಆ ಕೋಪಕ್ಕೆ ಕಾರಣವಾಗಿತ್ತು.

ಒಂದು ದಿನ ಅವನು ದೇವರನ್ನು ಕುರಿತು 'ಹೇ ದೇವರೇ, ಜನರು ನಿನ್ನನ್ನು ಸರ್ವಜ್ಞ, ಸರ್ವಾಂತರ್ಯಾಮಿ, ಸರ್ವಶಕ್ತಿಮಾನ್ ಎಂಬ ನಾನಾ ಹೆಸರುಗಳಿಂದ ಕರೆಯುತ್ತಾರೆ. ಆದರೆ ಸರ್ವಜ್ಞ ಎನಿಸಿಕೊಂಡ ನಿನಗೆ ಬೇಸಾಯದ ಬಗ್ಗೆ ಏನೇನೂ ಜ್ಞಾನವಿಲ್ಲ ಎಂದು ತೋರುತ್ತದೆ. ಏಕೆಂದರೆ ನೀನು ಒಮ್ಮೆ ಹೆಚ್ಚು ಮಳೆ ಸುರಿಸುತ್ತೀಯಾ. ಒಮ್ಮೆ ಕಡಿಮೆ ಮಳೆ ಸುರಿಸುತ್ತೀಯಾ. ಒಮ್ಮೆ ಆಲಿಕಲ್ಲು ಮಳೆ ಸುರಿಸಿ ಬೆಳೆಯನ್ನು ಹಾಳು ಮಾಡುತ್ತೀಯಾ. ಇದರಿಂದ ರೈತರಿಗೆ ಅವರು ಇಚ್ಛೆಸಿದಷ್ಟು ಫಸಲು ಬರುವುದಿಲ್ಲ. ಆದ್ದರಿಂದ ಒಂದು ವರ್ಷ ನಾನು ಹೇಳಿದಂತೆ ಮಳೆ ಹಾಗೂ ಬಿಸಿಲನ್ನು ಕೊಡು. ಆಗ ನೋಡು ನಾನು ಅದೆಷ್ಟು ಬೆಳೆ ಬೆಳೆಯುವೆನೆಂದು' ಎಂದು ಹೇಳಿದ.

ರೈತನ ಮಾತನ್ನು ಕೇಳಿದ ದೇವರು ರೈತನ ಎದುರಿಗೆ ಪ್ರತ್ಯಕ್ಷನಾಗಿ 'ಹಾಗೆಯೇ ಆಗಲಿ. ನೀನು ಹೇಳಿದಂತೆಯೇ ನಾನು ಮಳೆ ಹಾಗೂ ಬಿಸಿಲನ್ನು ಕೊಡುತ್ತೇನೆ'ಎಂದು ಹೇಳಿ ಅಂತರ್ಧಾನನಾದ. ಆ ವರ್ಷ ರೈತ ತನ್ನ ಹೊಲದಲ್ಲಿ ಗೋಧಿಯನ್ನು ಬಿತ್ತಿದ. ರೈತ ಬೇಡಿದಂತೆ ದೇವರು ಮಳೆ ಬೇಕೆಂದಾಗ ಮಳೆ, ಬಿಸಿಲು ಬೇಕೆಂದಾಗ ಬಿಸಿಲನ್ನು ನೀಡುತ್ತ ಹೋದ. ಬೆಳೆ ಸೊಂಪಾಗಿ ಬೆಳೆಯಿತು. ಗೋಧಿಯ ಪೈರು ತುಂಬ ತೆನೆಗಳನ್ನು ಬಿಟ್ಟಿತು. ಅದನ್ನು ಕಂಡು ರೈತನಿಗೆ ತುಂಬ ಸಂತೋಷವಾಯಿತು.

ಬೆಳೆ ಕಟಾವು ಮಾಡುವ ಸಮಯ ರೈತ ಹಿಗ್ಗಿನಿಂದ ತನ್ನ ಗೋಧಿಯ ಪೈರನ್ನು ಕಟಾವು ಮಾಡಲು ಸಿದ್ಧನಾದ. ಆದರೆ ಒಂದು ತೆನೆಯಲ್ಲೂ ಗೋಧಿಯ ಕಾಳುಗಳೇ ಇರಲಿಲ್ಲ

ಇದರಿಂದ ತುಂಬ ದುಃಖಿತನಾದ ರೈತ 'ಹೇ ದೇವರೆ ಇದೇನನ್ನು ಮಾಡಿದೆ!' ಎಂದ.

ಆಗ ದೇವರು 'ನೀನು ಹೇಳಿದಂತೆಯೇ ನೀನು ಕೇಳಿದಾಗಲೇ ಬಿಸಿಲು ಹಾಗೂ ಮಳೆಯನ್ನು ನೀಡಿದ್ದೇನೆ. ತಪ್ಪು ನಿನ್ನದೇ. ನೀನು ನಿನ್ನ ಪೈರಿಗೆ ಎಲ್ಲವನ್ನೂ ಸಹಿಸಿಕೊಳ್ಳುವ ಶಕ್ತಿ ಬರುವಂತೆ ಮಾಡಲಿಲ್ಲ. ಬಿರುಗಾಳಿ ಹಾಗೂ ಆಲಿಕಲ್ಲುಗಳ ಹೊಡೆತ, ಚಳಿ ಇವುಗಳನ್ನು ಸಹಿಸಿಕೊಂಡಾಗಲೇ ಆ ಪೈರಿನಲ್ಲಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಶಕ್ತಿ ಜಾಗೃತವಾಗುತ್ತದೆ. ಅದು ಪೈರಿಗೆ ಕಷ್ಟ ಸಹಿಸುವ ಬಲವನ್ನು ನೀಡುತ್ತದೆ. ಎಲ್ಲ ಕುತ್ತುಗಳಿಂದ ಪಾರಾದಾಗಲೇ ಪೈರಿನಲ್ಲಿ ಹಾಲು ಕಟ್ಟುತ್ತದೆ. ಮಾನವನ ಜೀವನವೂ ಆ ಪೈರಿನಂತೆಯೇ ಸಂಘರ್ಷವಿಲ್ಲದ ಜೀವನವಾದರೆ ಆ ಗೋಧಿಯ ತೆನೆಗಳಂತೆ ಪೊಳ್ಳಾಗಿ ಬಿಡುತ್ತದೆ. ಜೀವನದಲ್ಲಿ ಸವಾಲುಗಳನ್ನು ಎದುರಿಸಿದಾಗಲೇ ಮಾನವರೂಪಿ ಖಡ್ಗ ಚೂಪಾಗುತ್ತದೆ. ಮಾನವನು ಪ್ರತಿಭಾಶಾಲಿಯಾಗಬೇಕಾದರೆ ಜೀವನದಲ್ಲಿ ಸವಾಲುಗಳನ್ನು ಎದುರಿಸಬೇಕು' ಎಂದು ರೈತನಿಗೆ ಹೇಳಿದ.

**-ಮುರಲೀಧರ ಕುಲಕರ್ಣಿ**